## ಭಾಗ–IV

## ಭಾಷೆ–I

## ಕನ್ನಡ

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-I ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-IV ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ 91 - 120) ಉತ್ತರಿಸಬೇಕು.

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ 91 - 99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಕಗ್ಗದ ಪ್ರಸ್ತಾಪ ಬಂದಾಗಲೆಲ್ಲ ಡಿ.ವಿ.ಜಿ. ನೆನಪಾಗುತ್ತಾರೆ. ಬಹುತೇಕ ಜನರು ಡಿ.ವಿ.ಜಿ. ಅವರನ್ನು ಮಂಕುತಿಮ್ಮನ ಕಗ್ಗದ ಕವಿಯೆಂದೇ ತಿಳಿದಿದ್ದಾರೆ. ಆದರೆ ಈ ಕಗ್ಗದ ಕವಿ ತಮ್ಮನ್ನು ಪತ್ರಕರ್ತನೆಂದೇ ಹೇಳಿಕೊಳ್ಳಲು ಹೆಮ್ಮೆ ಪಡುತ್ತಿದ್ದರು. ಒಂದೇ ಮಾತಿನಲ್ಲಿ ಹೇಳುವುದಾದರೆ ತಮ್ಮನ್ನು ತಾವು ಕರೆದುಕೊಳ್ಳುವ ಪ್ರಸಂಗ ಬಂದಾಗಲೆಲ್ಲ ಡಿ.ವಿ.ಜಿ. ತಮ್ಮನ್ನು ಪತ್ರಕರ್ತನೆಂದೇ ಹೇಳಿಕೊಳ್ಳುತ್ತಿದ್ದರು. ಅಷ್ಟೇ ಅಲ್ಲ ಸಾಹಿತ್ಯ ಕ್ಷೇತ್ರಕ್ಕೆ ತಾವೊಬ್ಬ ಆಗಂತುಕ ಎಂದು ತಾವೇ ಪ್ರತಿಪಾದಿಸುತ್ತಿದ್ದರು. ಅಂದರೆ ಸಾಹಿತ್ಯ ಮತ್ತು ಪತ್ರಿಕೆಗಳ ಮಧ್ಯೆ ನೀವು ಯಾವುದನ್ನು ಆಯ್ಕೆ ಮಾಡುತ್ತೀರಿ ಎಂದು ಕೇಳಿದರೆ ಮೊದಲು ತಾನು ಪತ್ರಕರ್ತ ಅನಂತರ ಸಾಹಿತಿ ಎಂದು ಯಾವುದೇ ಮುಜುಗರವಿಲ್ಲದೇ ಹೇಳುವುದನ್ನು ಆಲಿಸಿದಾಗ ಅದು ಸಾಹಿತಿಗಳಿಗೆ ಅಚ್ಚರಿಯೆನಿಸಿದರೆ ಪತ್ರಿಕಾ ಕ್ಷೇತ್ರದಲ್ಲಿರುವವರಿಗೆ ಹೆಮ್ಮೆಯ ಮಾತಲ್ಲವೇ ?

ಅಂದ ಹಾಗೆ ಅವರ ಪತ್ರಿಕಾ ಜೀವನ ದರ್ಶನದ ಅವಲೋಕನ ಮಾಡುತ್ತಿದ್ದಂತೆ ಅನೇಕ ಕುತೂಹಲಕರ ಸಂಗತಿಗಳು ಬೆಳಕಿಗೆ ಬರುತ್ತವೆ. ಅವರ ಪತ್ರಿಕಾ ವ್ಯವಸಾಯದ ಅಧ್ಯಯನ ಮಾಡುತ್ತಿದ್ದಂತೆ ನಮಗೆ ಭಾರತೀಯ ಪತ್ರಿಕೋದ್ಯಮದ ಪಿತಾಮಹ ಎಂದೇ ಹೆಸರಾಗಿರುವ ಜೇಮ್ಸ್ ಅಗಸ್ಟಸ್ ಹಿಕಿ ನೆನಪಾಗುತ್ತಾನೆ. ಆತ ಬ್ರಿಟಿಷ್ ಪ್ರಜೆಯಾದರೂ ಭಾರತೀಯ ಪತ್ರಿಕೋದ್ಯಮದ ಆರಂಭಕ್ಕೆ ಅಸ್ಥಿವಾರ ಇಟ್ಟ ಪ್ರಾತಃಸ್ಮರಣೀಯ ಪತ್ರಿಕೋದ್ಯಮಿ. ಅಂದಿನ ಬ್ರಿಟಿಷ್ ಸರಕಾರದ ದಮನಕಾರಿ ಪ್ರವೃತ್ತಿಯನ್ನು ಎದುರಿಸಿ ನಿಂತು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಾಮಾಣಿಕತೆಯನ್ನು ಜೀವನದುದ್ದಕ್ಕೂ ಎತ್ತಿಹಿಡಿದ ನೀತಿವಂತನಿವನು. ಬಾಯಿ ನಿಂತರೆ ಮೂಗಿನಲ್ಲಿ ಹಾಡುವೆ ಎಂದು ಜೈಲಿನಲ್ಲಿ ಇದ್ದಾಗಲೂ ಎದೆಗುಂದದೇ ಪೆನ್ನು ಹಿಡಿದು ಸತ್ಯವನ್ನು ಜಾಲಾಡಿ ಗೆದ್ದವನು ! ಇದೇ ಸಂದರ್ಭದಲ್ಲಿ ಭಾರತೀಯ ಭಾಷಾ ಪತ್ರಿಕೋದ್ಯಮದ ಮೊಟ್ಟ ಮೊದಲ ಮೇರು ವ್ಯಕ್ತಿ ಸಾಮಾಜಿಕ ಬದಲಾವಣೆಯ ಹರಿಕಾರ ರಾಜಾರಾಮ್ ಮೋಹನರಾಯ್, ಪತ್ರಿಕಾ ವ್ಯವಸಾಯದ ಮೂಲಕವೇ ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಿಡಿ ಹಚ್ಚಿ ಅಹಿಂಸಾತ್ಮಕ ಹೋರಾಟಕ್ಕೆ ನಾಂದಿ ಹಾಡಿದ ಮಹಾತ್ಮ ಗಾಂಧಿ ಅವರು, ಡಿ.ವಿ. ಗುಂಡಪ್ಪನವರ ಪತ್ರಿಕಾ ಧರ್ಮದ ಅನುಷ್ಠಾನ ನೋಡಿದರೆ ನೆನಪಾಗುತ್ತಾರೆ. ಅದೇ ಪ್ರವೃತ್ತಿ, ಅದೇ ನಿಲುವು ನಮ್ಮ ಹೆಮ್ಮೆಯ ಪತ್ರಕರ್ತ ಡಾ. ಡಿ.ವಿ. ಗುಂಡಪ್ಪನವರದ್ದು. ಎಂಥ ಸಂಕಷ್ಟ ಎದುರಾದರೂ ತಮ್ಮ ತತ್ವವೇ ಸಾರ್ವಜನಿಕ ತತ್ವವೆಂದು ಸಾರಿ ಅದನ್ನು ಶಾಶ್ವತೀಕರಣಗೊಳಿಸಿ ಇಂದಿಗೂ ಅದರ ಪ್ರಖರತೆ ಸ್ವಲ್ಪವೂ ಮುಕ್ಕಾಗದಂತೆ ಮಾಡಿ ಪತ್ರಿಕಾ ರಂಗದಲ್ಲಿ ಧ್ರುವ ತಾರೆಯಾಗಿ ಬೆಳೆದವರು.

1843 ರ ಜುಲೈ 1 ರಂದು ಮಂಗಳೂರು ಸಮಾಚಾರ ಕನ್ನಡ ಪತ್ರಿಕೋದ್ಯಮಕ್ಕೆ ಅಡಿಪಾಯ ಹಾಕಿದ ನಂತರ ಅನೇಕ ಹಿರಿಯ ಸಾಹಿತಿಗಳು, ಪತ್ರಕರ್ತರೂ ಕನ್ನಡ ಪತ್ರಿಕಾ ವ್ಯವಸಾಯದಲ್ಲಿ ತೊಡಗಿಸಿಕೊಂಡು ಅಜರಾಮರ–ರಾಗಿದ್ದಾರೆ. ಅವರಲ್ಲಿ ವೆಂಕಟಕೃಷ್ಣಯ್ಯ, ತಿ.ತಾ.ಶರ್ಮಾ, ನಂಜನಗೂಡು ತಿರುಮಲಾಂಬಾ, ಆರ್.ಕಲ್ಯಾಣಮ್ಮ, ಟಿ.ಎಸ್.ರಾಮಚಂದ್ರರಾಯರು, ಮೊಹರೆ ಹಣಮಂತ–ರಾಯರು ಮೊದಲಾದವರ ಹೆಸರು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಆದರೆ ಅವರೆಲ್ಲರ ಬೆಳಕಿನ ಪ್ರಖರತೆಗೆ ಇನ್ನಷ್ಟು ಮೆರಗನ್ನು ನೀಡಿ ಜನಮಾನಸದಲ್ಲಿ ಶಾಶ್ವತವಾಗಿ ನಿಂತವರೆಂದರೆ ಡಿ.ವಿ.ಜಿ. ಅವರೇ.

TEACHERS adda247

**91.** 'ಪ್ರಾತಃ ಸ್ಮರಣೀಯ' ಅಂದರೆ :

(1) ಗೌರವಕ್ಕೆ ಅರ್ಹ.

(2) ಪ್ರೀತಿಸಲು ಅರ್ಹ.

(3) ಯಾವಾಗಲೂ ಗೌರವಿಸಬೇಕಾದವರು.

(4) ದಿನವೂ ಮುಂಜಾನೆ ನೆನಪಿಸಿ-ಕೊಳ್ಳುವಂಥವರು.

**92.** ರಾಜಾರಾಮ್ ಮೋಹನರಾಯ್ ಅವರನ್ನು ಏನೆಂದು ಕರೆಯುತ್ತಾರೆ ?

(1) ಇಂಗ್ಲೀಷಿನ ಪತ್ರಿಕೋದ್ಯಮದ ಸ್ಥಾಪಕ.

(2) ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿದವರು.

(3) ಸಾಮಾಜಿಕ ಬದಲಾವಣೆ ತಂದವರು.

(4) ಗಾಂಧೀಜಿಯ ಆಪ್ತಶಿಷ್ಯರು .

**93.** ಕನ್ನಡ ಪತ್ರಿಕೋದ್ಯಮಕ್ಕೆ ಅಡಿಪಾಯ ಹಾಕಿದ ಪತ್ರಿಕೆ :

(1) ಪ್ರಜಾವಾಣಿ.

(2) ಮಂಗಳೂರು ಸಮಾಚಾರ.

(3) ಮಂಕುತಿಮ್ಮನ ಕಗ್ಗ.

(4) ಕನ್ನಡ ಪ್ರಭ.

**94.** 'ನಿರ್ಭೀತ' ಪದದ ವಿರುದ್ಧ ಪದ :

(1) ಅಭೀತ.

(2) ಭೀತ.

(3) ಸಭೀತ.

(4) ಸರ್ಭೀತ.

**95.** 'ಅಚ್ಚರಿ' ಪದದ ತತ್ಸಮ :

(1) ಆಶ್ಚರ್ಯ.

(2) ಆಚರ್ಯ.

(3) ಅಷ್ಚರ್ಯ.

(4) ಆಚುರ್ಯ.

**96.** 'ಅಭಿವ್ಯಕ್ತಿ ಸ್ವಾತಂತ್ರ್ಯ' ಎಂದರೆ :

(1) ಇಷ್ಟಬಂದಂತೆ ಮಾತನಾಡುವುದು.

(2) ವ್ಯಕ್ತಿಯ ಸ್ವಾತಂತ್ರ್ಯ.

(3) ತನ್ನ ಅಭಿಪ್ರಾಯವನ್ನು ಹೇಳುವ ಹಕ್ಕು.

(4) ಅನ್ನಿಸಿದ್ದನ್ನು ಹೇಳುವುದು.

**97.** ಈ ಪ್ರಬಂಧ ಭಾಗದಲ್ಲಿ ಬಳಸಿದ 'ಧ್ರುವತಾರೆ' ಪದದ ಅರ್ಥ :

(1) ಧ್ರುವ ನಕ್ಷತ್ರ.

(2) ಬೆಳಗುವ ನಕ್ಷತ್ರ.

(3) ದೂರದ ನಕ್ಷತ್ರ.

(4) ಯಾವಾಗಲೂ ಹೊಳೆಯುವ.

**98.** ಇಲ್ಲಿ ಉಲ್ಲೇಖಿತವಾದ 'ಕಗ್ಗ'ವು ಏನು ?

(1) ಪತ್ರಿಕೆಯ ಬರಹ.

(2) ನೀತಿ ಹೇಳುವ ಪದ್ಯಗಳ ಕೃತಿ.

(3) ಕೆಟ್ಟ ಹಾಡುಗಳ ಸಂಗ್ರಹ.

(4) ಕಥಾ ಸಂಗ್ರಹ.

**99.** ಭಾರತದ ಪತ್ರಿಕೋದ್ಯಮದ ಪಿತಾಮಹ :

(1) ಜೇಮ್ಸ್ ಹಿಕ್.

(2) ಡಿ.ವಿ.ಜಿ.

(3) ಟಿ.ಎಸ್. ರಾಮಚಂದ್ರರಾಯರು.

(4) ತಿ.ತಾ. ಶರ್ಮರು.

TEACHERS adda247

ನಿರ್ದೇಶನ : ಕೆಳಗಿನ ಪದ್ಯವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ 100 - 105) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.

ನನ್ನ ಪ್ರೇಮದ ಹುಡುಗಿ ತಾವರೆಯ ಹೊಸಕೆಂಪು,
ತಾವರೆಯ ಹೊಸ ಅರಳ ಹೊಳೆವ ಕೆಂಪು,
ನನ್ನ ಪ್ರೇಮದ ಹುಡುಗಿ ಕೊಳಲ ಮೆಲುನುಡಿಯಿಂಪು,
ಕೊಳಲು ಮೋಹಿಸಿ ನುಡಿವ ಗಾನದಿಂಪು.

ಬೆಳೆಬೆಳೆಯುತೆಷ್ಟೆಷ್ಟು ಬಿನ್ನಾಣ, ಎಲೆ ಚೆಲುವೆ,
ಮುಳುಗಿದೆನು ಅಷ್ಟಷ್ಟು ಪ್ರೇಮದೊಳಗೆ,
ಬತ್ತುವುವು ಕಡಲುಗಳು ಮುಂದಾಗಿ, ಎಲೆ ಚೆಲುವೆ,
ಬತ್ತಲಾರದು ತೊಟ್ಟು ಪ್ರೇಮದೊಳಗೆ.

TEACHERS adda247

**100.** 'ಕೊಳ ಮೆಲುನುಡಿಯಿಂಪು' – ಈ ಸಾಲಿನಲ್ಲಿ ವ್ಯಕ್ತವಾಗಿರುವ ಅಲಂಕಾರ :

(1) ಉಪಮೆ.

(2) ರೂಪಕ.

(3) ಸಾದೃಶ್ಯ.

(4) ಅರ್ಥಾಂತರ.

**101.** 'ಗಾನದಿಂಪು' ಪದವನ್ನು ಬಿಡಿಸಿ.

(1) ಗಾನದ + ಇಂಪು.

(2) ಗಾನ + ಇದ + ಇಂಪು.

(3) ಗಾನ + ದಿಂಪು.

(4) ಗಾನದಿಂ + ಪು.

**102.** 'ಬೆಳೆ ಬೆಳೆಯತೆಷ್ಟೆಷ್ಟು ಬಿನ್ನಾಣ !' – ಈ ವಾಕ್ಯದ ಅರ್ಥವ್ಯಾಪ್ತಿ ಏನು ?

(1) ಪೈರು ಬೆಳೆಯುತ್ತ ತೂಗಿ ಬಿನ್ನಾಣ ತೋರುವುದು.

(2) ಹುಡುಗ ಬೆಳೆಯುತ್ತ ಬಿನ್ನಾಣ ತೋರುವುದು.

(3) ಹದಿಹರೆಯ ಬಂದ ಹಾಗೆ ಒದಗಿದ ಚೆಲುವಿನ ಬಗೆಗಿನ ಉದ್ಗಾರ.

(4) ಎಷ್ಟು ಎಷ್ಟು ವೈಯಾರ ಎಂಬ ಪ್ರಶ್ನೆ.

**103.** ಹುಡುಗಿಯನ್ನು ಯಾವುದಕ್ಕೆ ಹೋಲಿಸಲಾಗಿದೆ ?

(1) ತಾವರೆ.

(2) ಕೊಳಲು.

(3) ಕಡಲು.

(4) ತಾವರೆಯ ಕೆಂಪಾದ ಬಣ್ಣ.

**104.** ಬತ್ತದೆ ಇರುವಂಥದ್ದು ಯಾವುದು ?

(1) ಪ್ರೇಮ.

(2) ಪ್ರೇಮಜಲ.

(3) ಕಡಲು.

(4) ದುಃಖದ ಕಣ್ಣೀರು.

**105.** ಕವನದಲ್ಲಿ ಯಾರು ಯಾರನ್ನು ಉದ್ದೇಶಿಸಿ ಹೇಳುತ್ತಿದ್ದಾರೆ ?

(1) ಹುಡುಗ – ಹುಡುಗಿಗೆ.

(2) ಗಂಡ – ಹೆಂಡತಿಗೆ.

(3) ಚೆಲುವ – ಚೆಲುವೆಗೆ.

(4) ಪ್ರೇಮಿ – ಪ್ರಿಯತಮೆಗೆ.

**106.** ಕಾವ್ಯವನ್ನು ಕಲಿಸುವಾಗ ಈ ಕೆಳಗಿನವುಗಳಲ್ಲಿ ಯಾವುದು ಹೆಚ್ಚು ಮಹತ್ವದ್ದು ?

(1) ಪ್ರತಿಯೊಂದು ಕವನಕ್ಕೂ ಒಂದು ಖಚಿತವಾದ ಅರ್ಥ ಇರುತ್ತದೆ.

(2) ಕವನಗಳಿಗೆ ಒಂದಕ್ಕಿಂತ ಹೆಚ್ಚು ಅರ್ಥಗಳಿರುತ್ತವೆ.

(3) ಕವನವು ಸಾಮಾಜಿಕ ಸಮಸ್ಯೆಗಳನ್ನು ಪ್ರತಿಬಿಂಬಿಸುವುದಿಲ್ಲ.

(4) ಕವನವು ಯಾವುದೇ ಭಾವನಾತ್ಮಕ ಆಯಾಮವನ್ನು ಪ್ರತಿಬಿಂಬಿಸುವುದಿಲ್ಲ.

**107.** 'ವರದಿ ಬರಹ' **(Report writing)**ದ ಮಾದರಿಯನ್ನು ಕಲಿಸುವ ಅಧ್ಯಾಪಿಕೆಯು ದಿನಪತ್ರಿಕೆಯಲ್ಲಿ ಪ್ರಕಟವಾದ ಕೆಲವು ವರದಿಗಳನ್ನು ವಿದ್ಯಾರ್ಥಿಗಳಿಗೆ ಹಂಚಿದ್ದಾಳೆ. ಅವಳು ವಿದ್ಯಾರ್ಥಿಗಳಿಗೆ ವರದಿಯನ್ನು ಓದಿ, ಅದರ ಬಗ್ಗೆ ಅವರ ಟಿಪ್ಪಣಿಯನ್ನು ಬರೆಯಲು ಹೇಳುತ್ತಾಳೆ. ಅಧ್ಯಾಪಿಕೆಯು ಕ್ಲಾಸಿನಲ್ಲಿ ಉಪಯೋಗಿಸಿದ ಪತ್ರಿಕಾ ವರದಿಯನ್ನು ಹೀಗೆ ಕರೆಯುತ್ತಾರೆ :

(1) ಕಲಿಸುವಿಕೆಯ ಸಹಾಯಕ ಸಾಮಗ್ರಿ.

(2) ಕಲಿಕೆಯ ಸಹಾಯಕ ಸಾಮಗ್ರಿ.

(3) ಕಲಿಸುವ – ಕಲಿಯುವ ಸಾಮಗ್ರಿ.

(4) ಕಲಿಸುವ ವಿಧಾನ ಮತ್ತು ಉಪಾಯಗಳು.

**108.** ಭಾರತದಲ್ಲಿ ಎಷ್ಟು ಭಾಷಾ ಕುಟುಂಬಗಳಿವೆ ?

(1) ನಾಲ್ಕು.

(2) ಆರು.

(3) ಎಂಟು.

(4) ಹತ್ತು .

**109.** ಭಾಷಾ ಕಲಿಕೆಯ ಯಾವ ವಿಧಾನವು ಭಾಷಾ ಕ್ಲಾಸ್ ರೂಮಿನಲ್ಲಿ ಮಾತೃಭಾಷೆಯ ಬಳಕೆಯನ್ನು ನಿಷೇಧಿಸುತ್ತದೆ ?

(1) ನೇರ ವಿಧಾನ (Direct method).

(2) ಶ್ರವಣ ಭಾಷಾ ವಿಧಾನ (Audiolingual method).

(3) ನಿಮಗ್ನತಾ ವಿಧಾನ (Immersion method).

(4) ಸಹಜ ವಿಧಾನ (Natural method).

**110.** ಭಾಷೆಯನ್ನು ಕಲಿಸುವಾಗ ಅಧ್ಯಾಪಿಕೆಯು ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳ ಉದಾಹರಣೆಯನ್ನು ಕೊಡುತ್ತಾಳೆ. ಈ ವಿಧಾನವನ್ನು ಹೀಗೆ ಕರೆಯಬಹುದು :

(1) ವಿಜ್ಞಾನ ಮತ್ತು ಭಾಷೆಯ ಕಲಿಸುವಿಕೆ.

(2) ಪಠ್ಯಕ್ರಮ ಮೀರಿದ ಭಾಷಾ ಕಲಿಕೆ.

(3) ಟಿ.ಪಿ.ಆರ್. ವಿಧಾನ.

(4) ಸಿ.ಎಲ್.ಟಿ. ವಿಧಾನ.

TEACHERS adda247

**111.** ಭಾಷಾ ಕಲಿಕೆಯ ಮೇಲಿನ ಜ್ಞಾನಾತ್ಮಕ **(cognitive)** ದೃಷ್ಟಿಕೋನವು **(perspective)** ಇದರ ಮೇಲೆ ಒತ್ತು ಕೊಡುತ್ತದೆ :

(1) ತಪ್ಪುಗಳು ಭಾಷಾ ಕಲಿಕಾ ಪ್ರಕ್ರಿಯೆಯ ಅಂಗವಾಗಿವೆ.

(2) ಭಾಷಾ ಕಲಿಕೆಯಲ್ಲಿ ರೂಢಿಗೊಳ್ಳುವ ಪ್ರಕ್ರಿಯೆಯು (habit formation) ಸಹಾಯ ಮಾಡುತ್ತದೆ.

(3) ಅಧ್ಯಾಪಿಕೆಯು ಸಂಭಾಷಣೆಗಳನ್ನು ಕಂಠಸ್ಥ ಮಾಡಲು ಮತ್ತು ಪುನರಾವರ್ತಿಸಲು ಉತ್ತೇಜಿಸಬೇಕು.

(4) ತಪ್ಪುಗಳನ್ನು ಕೂಡಲೇ ಸರಿ ಮಾಡಬೇಕು, ಇಲ್ಲದಿದ್ದರೆ ಅವುಗಳು ಮಗುವಿನ ಮನಸ್ಸಿನಲ್ಲಿ ಉಳಿದು ಬಿಡುತ್ತವೆ.

**112.** ಕಲಿಯುವವರ ಅತಿಯಾದ ಹಿಂದುಳಿದಿರುವಿಕೆಯ ಕಾರಣಗಳನ್ನು ತಿಳಿಯಲು ಅಧ್ಯಾಪಿಕೆಯು __________ ಪರೀಕ್ಷೆಯನ್ನು ಸಿದ್ಧಪಡಿಸುತ್ತಾಳೆ.

(1) ನಿಪುಣತೆಯ ಪರೀಕ್ಷೆ (Proficiency test).

(2) ಪರಿವೀಕ್ಷಣಾ ಟೆಸ್ಟ್ (Diagnostic test).

(3) ಸಾಧನೆಯ ಪರೀಕ್ಷೆ (Achievement test).

(4) ಸಂಕಲನ–ಫಲ ಪರೀಕ್ಷೆ (Summative test).

**113.** ಆರನೇ ತರಗತಿಯ ಭಾಷಾ ಅಧ್ಯಾಪಿಕೆಯು ಭಾಷಾ ಪರೀಕ್ಷೆಯ ಉತ್ತರ ಪತ್ರಿಕೆಗಳಲ್ಲಿ ವಿದ್ಯಾರ್ಥಿಗಳು ಚೆನ್ನಾಗಿ ಮಾಡಿಲ್ಲವೆಂದು ಕಂಡುಕೊಂಡಳು. ನಂತರ ಅವಳು ಇನ್ನೊಂದು ಪರೀಕ್ಷೆಯನ್ನು ನಿರ್ಮಿಸಿ, ಅದನ್ನು ಪ್ರಯೋಗಿಸಿದಳು. ಈ ಪರೀಕ್ಷೆಯನ್ನು ಏನೆಂದು ಕರೆಯುತ್ತಾರೆ ?

(1) ಪ್ರಾರಂಭಿಕ ಪರೀಕ್ಷೆ (Formative test).

(2) ಸಂಕಲನಾತ್ಮಕ ಪರೀಕ್ಷೆ (Summative test).

(3) ಪರಿವೀಕ್ಷಣಾ ಪರೀಕ್ಷೆ (Diagnostic test).

(4) ಸಂಚಿತ ಪರೀಕ್ಷೆ (Cumulative test).

**114.** ಒಬ್ಬ ಭಾಷಾ ಅಧ್ಯಾಪಿಕೆಯು ತರಗತಿಯಲ್ಲಿ ಪಾಠ ಮಾಡಿದ ನಂತರ ತನ್ನ ಡೈರಿಯಲ್ಲಿ ಹೀಗೆ ಬರೆಯುತ್ತಾಳೆ.

"ವಿದ್ಯಾರ್ಥಿಗಳಿಗೆ ಭಾಷಾ ಆಟ **(Language game)** ಬಹಳ ಇಷ್ಟವಾಯಿತು. ಅವರು ಅದರಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದರು. ಆದರೆ ಗ್ರೂಪ್–3 ರ ವಿದ್ಯಾರ್ಥಿಗಳು ಅಗತ್ಯವಾದ ಫಲವನ್ನು ಸಾಧಿಸುವಲ್ಲಿ ಬಹಳ ಕಷ್ಟಪಟ್ಟರು." ಇದು ಅವಳ __________ ಉದಾಹರಣೆಯಾಗಿದೆ.

(1) ನಿರ್ಣಯದ (Assessment)

(2) ಉಪಾಖ್ಯಾನದ ದಾಖಲೆಯ (Anecdotal record)

(3) ಚಿಂತನಾತ್ಮಕ ಆಲೋಚನೆಗೆ (reflective thinking)

(4) ಗಮನಿಸುವಿಕೆಯ (observation)

**115.** ಒಬ್ಬ ಸಮರ್ಥ ಭಾಷಾ ಅಧ್ಯಾಪಿಕೆಯು :

(1) ಪಠ್ಯಪುಸ್ತಕಗಳಲ್ಲಿನ ಪ್ರಶ್ನೆಗಳಿಗೆ ಎಲ್ಲ ಉತ್ತರವನ್ನು ಕಲಿಯುವ ಹಾಗೆ ಮಾಡುತ್ತಾಳೆ.

(2) ಪಠ್ಯಪುಸ್ತಕವನ್ನು ಉಪಯೋಗಿಸಿದರೂ, ಅದರ ಆಚೆಗೆ ಯೋಚಿಸುವುದನ್ನು ಮಾಡುತ್ತಾಳೆ.

(3) ಕೇವಲ ಪಠ್ಯಪುಸ್ತಕ ಆಧಾರಿತ ಪ್ರಶ್ನೆಪತ್ರಿಕೆ–ಗಳನ್ನು ಸಿದ್ಧಗೊಳಿಸುತ್ತಾಳೆ.

(4) ನಿರ್ದಿಷ್ಟ ಪಠ್ಯಪುಸ್ತಕದ ಆಚೆಗೆ ಯೋಚಿಸುವುದನ್ನು ಬಯಸುವುದಿಲ್ಲ.

**116.** ಭಾಷಾ ಕಲಿಕೆಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಬಹಳ ಮಹತ್ವದ್ದಾಗಿದೆ ?

(1) ಪಠ್ಯಪುಸ್ತಕ.

(2) ಓದುವ ಪೂರಕ ಸಾಮಗ್ರಿ.

(3) ಮಕ್ಕಳ ಸಾಹಿತ್ಯ.

(4) ಕಾರ್ಯ ಚಟುವಟಿಕೆಯ ವಿವರದ ಪುಟ (Activity sheet).

TEACHERS adda247

**117.** ಈ ಕೆಳಗಿನವುಗಳಲ್ಲಿ ಯಾವುದು ಕಲಿಯುವವರಲ್ಲಿ ಹೆಚ್ಚು ಸೃಜನಶೀಲತೆಯನ್ನು ಹೆಚ್ಚಿಸುತ್ತದೆ ?

(1) ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸುವಂತೆ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು.

(2) ವಿದ್ಯಾರ್ಥಿಗಳ ಅನುಭವಕ್ಕೆ ಅನುಗುಣವಾಗಿ, ಸ್ವತಂತ್ರವಾಗಿ ಬರೆಯಲು ಅವಕಾಶವನ್ನು ಒದಗಿಸುವುದು.

(3) ನೈತಿಕತೆ ಆಧಾರಿತ ಕಥೆಗಳನ್ನು ಓದುವಂತೆ ಮತ್ತು ಬರೆಯುವಂತೆ ವಿದ್ಯಾರ್ಥಿಗಳಿಗೆ ಹೇಳುವುದು.

(4) ಕಲಿಯುವುದರಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಹೇಳುವುದು.

**118.** ಭಾಷೆಯಲ್ಲಿ "ಮೈಂಡ್ ಮ್ಯಾಪಿಂಗ್" ಅಂದರೆ :

(1) ಮನಸ್ಸಿನ ಚಿತ್ರವನ್ನು ಬರೆಯುವುದು.

(2) ಒಂದು ಕಥೆ/ಕವನದಲ್ಲಿ ಚರ್ಚಿತವಾದ ಪ್ರದೇಶದ ಭೂಪಟವನ್ನು ಚಿತ್ರವಾಗಿಸಿ ಬರೆಯುವುದು.

(3) ಒಂದು ಸಾಹಸದ ಕಾರ್ಯಕ್ಕಾಗಿ ಕ್ರಿಯಾನಕ್ಷೆಯನ್ನು ರೂಪಿಸಿ, ಅದನ್ನು ಕುರಿತು ಬರೆದು ಒಪ್ಪಿಸಲು ವಿದ್ಯಾರ್ಥಿಗಳಿಗೆ ಹೇಳುವುದು.

(4) ವಿದ್ಯಾರ್ಥಿಗಳು ಹೊಸ ವಿಚಾರಗಳನ್ನು ಗ್ರಹಿಸಿ, ಸೃಜಿಸಿ ಹಾಗೂ ಅವುಗಳ ನಡುವಿನ ಸಂಬಂಧವನ್ನು ಕಟ್ಟಲು ಅನುವು ಮಾಡಿಕೊಡುವುದು.

**119.** ಬರವಣಿಗೆಯ ಕೌಶಲ್ಯವನ್ನು ಬೆಳೆಸಲು ಈ ಕೆಳಗಿನವುಗಳಲ್ಲಿ ಯಾವುದು ಮುಖ್ಯ ?

(1) ಸುಂದರವಾದ ಕೈಬರಹದಲ್ಲಿ ಬರೆಯುವುದು.

(2) ಸರಿಯಾದ ಕಾಗುಣಿತವನ್ನು ಬಳಸುವುದು.

(3) ತ್ವರಿತವಾಗಿ ಕೊಡಲ್ಪಟ್ಟದ್ದನ್ನು (prompts) ಬರೆಯುವುದು, ಮತ್ತು ಸೂಚನೆಗಳನ್ನು ಪಾಲಿಸುವುದು.

(4) ಬರಹದಲ್ಲಿ ನಿಮ್ಮ ದೃಷ್ಟಿಕೋನ, ವಿಚಾರ ಮತ್ತು ಅನುಭವಗಳನ್ನು ಹೇಳುವುದು.

TEACHERS adda247

**120.** ಕಲಿಯುವವನು ಸಂತೋಷಕ್ಕಾಗಿ ಓದುವ ಹಾಗೂ ಸಾಮಾನ್ಯ ಓದಿನ ಕೌಶಲ್ಯವನ್ನು ಬೆಳೆಸಿಕೊಳ್ಳಲು ಓದುವ, ಓದುವಿಕೆಯ ರೀತಿಯನ್ನು ಹೀಗೆ ಕರೆಯುತ್ತಾರೆ :

(1) ಸೂಕ್ಷ್ಮ ಓದುವಿಕೆ (Intensive Reading).

(2) ವ್ಯಾಪಕ ಓದುವಿಕೆ (Extensive Reading).

(3) ಪೂರ್ವ ಓದುವಿಕೆ (Pre-Reading).

(4) ನಂತರದ ಓದುವಿಕೆ (Post Reading).

## ಭಾಗ – V

## ಭಾಷೆ – II

## ಕನ್ನಡ

| ಅಭ್ಯರ್ಥಿಗಳು ಕನ್ನಡವನ್ನು ಭಾಷೆ-II ಎಂದು ಆರಿಸಿಕೊಂಡಿದ್ದರೆ ಮಾತ್ರ, ಭಾಗ-V ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ 121 - 150) ಉತ್ತರಿಸಬೇಕು. |
|---|

**ನಿರ್ದೇಶನ : ಕೆಳಗಿನ ಗದ್ಯವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ 121 - 128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಕೂಡಲೇ ಎದ್ದು ಹೋಗಿ ಹತ್ತಿರದಲ್ಲೇ ಬೆಳೆದು ನಿಂತಿದ್ದ ಹುತ್ತವೊಂದರೊಳಗೆ ಕೈಯಿಟ್ಟಳು. ಆದರೆ ಎಷ್ಟು ಹೊತ್ತು ಅವಳು ಕೈಯಿಟ್ಟುಕೊಂಡಿದ್ದರೂ ಹುತ್ತದೊಳಗಿಂದ ಹಾವು ಹೆಡೆಯೆತ್ತಿ ತನ್ನ ವಿಷದಂಷ್ಟ್ರದಿಂದ ಕೈಕಚ್ಚದಿದ್ದುದು ಅವಳಿಗೆ ಮತ್ತೂ ವ್ಯಥೆಯಾಯಿತು. "ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲುದ್ದ ನೀರು" ಎಂದು ಗೊಣಗಿಕೊಳ್ಳುತ್ತ ಅಲ್ಲಿಂದ ಸರಕ್ಕನೆದ್ದು ಮನೆಯ ಕಡೆ ಹೊರಟಳು.

ಸರ್ವಮಂಗಳೆ ಕೊತ್ತೇಗಾಲಕ್ಕೆ ಬಂದು ಆರು ತಿಂಗಳಾಗಿತು. ಒಂದು ಮಧ್ಯಾಹ್ನ ತೋಟದ ಆಳುಗಳಿಗೆ ಹಿಟ್ಟು ಕೊಟ್ಟು ಮಂಗಳೆ ಒಬ್ಬಳೇ ಮನೆ ಕಡೆ ಹೊರಟಿದ್ದಳು. ಇದ್ದಕ್ಕಿದ್ದಂತೆಯೇ ಎಲ್ಲಿಂದಲೋ ಪ್ರತ್ಯಕ್ಷವಾಗಿ ಬಸವಾಚಾರಿ ಅವಳಿಗೆ ಅಡ್ಡಲಾದನು. ಮಂಗಳೆ ಭೀತಳಾದಳು. "ಈ ಪಿಶಾಚಿ ಮರಳಿ ಬಂದಿದೆಯಲ್ಲಾ ? ... ಪುನಃ ಹಿಂದಿನಂತೆ ಅಸಹ್ಯವಾಗಿ ವರ್ತಿಸಿದರೆ ಗತಿಯೇನು ?" ಎಂದು ಅವಳು ಕಳವಳಗೊಂಡಳು. ಆದರೆ ಬಸವಾಚಾರಿ ಬಂದವನೇ ಮಂಗಳೆಯ ಎರಡೂ ಪಾದಗಳನ್ನು ಹಿಡಿದು ಅಳತೊಡಗಿದನು. "ಅಕ್ಕಾ ನಾನು ನಿಂಗೆ ತುಂಬ ತಪ್ಪು ಮಾಡಿದೆ. ಆದರೂ ದಯಾರಸದಿಂದ ನನ್ನ ಹೆಂಡತೀನೂ ನನ್ನೂ ಕಾಪಾಡಿದ್ದೀ. ನೀನು ಕಲ್ಲಹಳ್ಳಿಯಲ್ಲಿ ಕೊಡಿಸಿದ ಔಷಧಿಯಿಂದ ಅವಳ ಕಾಯಿಲೆ, ನನ್ನ ಕಾಯಿಲೆ ಎಲ್ಲ ವಾಸಿ ಆಯ್ತು. ನಾನು ಆ ದೊಂಬರ ಚೆನ್ನಿ ಸಹವಾಸ ಮಾಡಿ ಕೆಟ್ಟ ಗತಿ, ಕೀಳು ಗತಿ ಕಂಡಿದ್ದೆ. ನಾನು ನರಳಾಡ್ತ ಹಟ್ಟೀಗೆ ಬಂದು ಬಿದ್ದಾಗ ನರಸಜ್ಜಿ "ಮುಂಡೇದು ತಿರುಗ ನಮ್ಮತ್ರ ದುಡ್ಡು ಕಿತ್ತುಕಳೂ ಸಲುವಾಗಿ ಆಟ ಹೂಡದೆ ಚೆಲುವೇ ... ನಾ ಕಾಣನ್ಯಾ ? ನರಳಲಿ, ನರಳಲಿ. ಅವನಿಗೊಂದು ಚಿಟ್ಟೆ ಕಾಸನೂ ಹತ್ತಿಸಬ್ಯಾಡ" ಅಂದಳು ಕಣಕ್ಕ ... ಆಗಲೀಗ ನಾನು ಮುಗಿದೆ ಅಂದುಕೊಂಡೆ. ನನ್ನ ಹೆಡತಿ ಬುಟ್ಟು ಹಟ್ಟೀಲೊಬ್ಬರೂ ನನ್ನ ಮಾತಾಡಿಸೋರೆ ಇರನಿಲ್ಲ. ಅವ್ವ ಕೂಡ ನರಸಜ್ಜಿ ರೇಗಿ ಕಂಡೋಳು ಅಂತ ನನ್ನ ಕಡೀಕೆ ಸುಳೀತಿರನಿಲ್ಲ. ಆಗ ನೀನು ಕೊಟ್ಟಿದ್ದ ಔಸದೀಯ ತಗೊಂಡು ಬಂದು ನನ್ನ ಹೆಡತಿ "ತಗೊನ್ನ. ಇದು ಬೋ ಒಳ್ಳೆ ಔಸದಿ. ಮಂಗಳಕ್ಕ ಇದ್ನ ಕಲ್ಲಹಳ್ಳೀಲಿ ನಂಗೆ ಕೊಡಿಸಿದ್ಲು. ಇದು ತಗೊಂಡು ನನ್ನ ಕಾಯಿಲೆ ಪೂರ್ತಾವಾಸಿಯಾಗದೆ ಎಂದಳು. ಅದು ಕೇಳಿ ಔಸದ ಕುಡಿಯಕ್ಕೆ ನಾನೂ ಒಪ್ಪಿಕೊಂಡೆ. ನಲವತ್ತೆಂಟು ದಿನ ಅದು ಕುಡಿಯೋದರೊಳಗೆ ರೋಗ ಎಲ್ಲ ಹೊಂಟೋಗಿ ಮತ್ತೆ ಟಗರಾಗಿ ಹೋದೆ" ಎಂದು ತಡೆದು ಕಣ್ಣೀರೊರೆಸಿಕೊಂಡು "ಮಂಗಳಕ್ಕ ನೀನು ಈ ಪಾಪಿಯ ಉಳಿಸಿಕೊಂಡೆ. ನಾನು ನಿಂಗೆ ಎಷ್ಟು ತಪ್ಪು ಮಾಡಿದರೂ ಎಲ್ಲಾನೂ ಒಳ ಹಾಕಿಕೊಂಡು ನನ್ನ ಕಾಪಾಡಿದೆ, ನೀನೆ ನನ್ನ ತಾಯಿ" ಎಂದು ಪುನಹ ಕೃತಜ್ಞತೆಯ ಕಂಬನಿ ಸುರಿಸತೊಡಗಿದನು. ಮಂಗಳೆಯ ಕಣ್ಣಿನಲ್ಲೂ ಹರ್ಷದ ನೀರು ತುಳುಕಾಡಿತು. ವಾತ್ಸಲ್ಯದಿಂದ ಬಸವಾಚಾರಿಯ ಕೈ ಹಿಡಿದು "ಹೋಗಲಿ ಆದದ್ದು ಆಗಿ ಹೋಯ್ತು. ಈಗಲಾದರೂ ಅಂಥ ಕೆಟ್ಟ ಸಹವಾಸಗಳನ್ನ ಮಾಡದೆ ಮುತ್ತಿನ ಹಾಗಿರುವ ನಿನ್ನ ಹೆಂಡತಿ ಸಂಗಡ ಬಾಳಾಡು" ಎಂದು ವಿವೇಕ ಹೇಳಿದಳು.

121. ಮಂಗಳೆ ಭೀತಳಾಗಲು ಕಾರಣ :

(1) ಬಸವಾಚಾರಿ ಪ್ರತ್ಯಕ್ಷವಾಗಿದ್ದು.

(2) ಬಸವಾಚಾರಿ ಅಸಹ್ಯವಾಗಿದ್ದಾನೆ ಎಂದು ಅನ್ನಿಸಿದ್ದು.

(3) ಬಸವಾಚಾರಿ ಅಸಹ್ಯವಾಗಿ ವರ್ತಿಸಬಹುದು ಎನ್ನುವ ಭಾವ.

(4) ಬಸವಾಚಾರಿ ಪಿಶಾಚಿಯಂತೆ ಕಂಡಿದ್ದು.

122. ಬಸವಚಾರಿ ಅಳಲು ಕಾರಣ :

(1) ಮಂಗಳೆಯನ್ನು ಮತ್ತೆ ನೋಡಿದ್ದರಿಂದ.

(2) ಹೆಂಡತಿ ಕಾಯಿಲೆ ಬಿದ್ದಿದ್ದರಿಂದ.

(3) ಮಂಗಳೆ ಸಹಾಯ ಮಾಡಿದ್ದರಿಂದ ಹುಟ್ಟಿದ ಪಾಪದ ಭಾವನೆ.

(4) ಕೆಟ್ಟ ಕಾಯಿಲೆ ತನಗೆ ಬಂದಿದ್ದರಿಂದ.

123. ಔಷಧಿಯನ್ನು ಯಾರು ಯಾರಿಗೆ ಕೊಟ್ಟರು ?

(1) ಬಸವಾಚಾರಿಗೆ ಮಂಗಳೆ ಕೊಟ್ಟಳು.

(2) ಮಂಗಳೆಗೆ ಔಷಧ ಮಾಡುವವಳು ಕೊಟ್ಟಿದ್ದು.

(3) ಮಂಗಳೆಯು ದೊಂಬರ ಚೆನ್ನಿಗೆ ಕೊಟ್ಟಿದ್ದು.

(4) ಮಂಗಳೆಯು ಬಸವಾಚಾರಿಯ ಹೆಂಡತಿಗೆ ಕೊಟ್ಟಿದ್ದು.

124. 'ಟಗರಾಗಿ ಹೋದ' ಎನ್ನುವುದರ ಅರ್ಥ :

(1) ಒರಟಾಗುವುದು.

(2) ಪ್ರಾಣಿಯಂತೆ ಆಗುವುದು.

(3) ಗಟ್ಟಿಮುಟ್ಟಾಗುವುದು.

(4) ರೋಗ ಹೋಗಿ ಟಗರಿನಂತೆ ಮೈಯುಳ್ಳವನಾಗುವುದು.

125. 'ವಿವೇಕ' ಪದದ ವಿರುದ್ಧಾರ್ಥ :

(1) ಅವಿವೇಕ. (2) ಸುವಿವೇಕ.

(3) ದುರ್ವಿವೇಕ. (4) ನಿರ್ವಿವೇಕ.

126. 'ದಯಾರಸ' – ಅಂದರೆ :

(1) ಅಹಿಂಸಾರಸ. (2) ಮೃದು ಭಾವನೆ.

(3) ಪ್ರೀತಿಯ ರಸ. (4) ಅನುಕಂಪ.

127. 'ಕಂಬನಿ' ಪದವು :

(1) ವಿಶೇಷಣ. (2) ನಾಮ ಪ್ರಕೃತಿ.

(3) ಸಂಧಿ. (4) ಕ್ರಿಯಾಪದ.

128. 'ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲುದ್ದ ನೀರು.' ಈ ಗಾದೆ ಮಾತಿನ ಅರ್ಥ :

(1) ದುರದೃಷ್ಟವಂತರಿಗೆ ದುಃಖ ತಪ್ಪಿದ್ದಲ್ಲ.

(2) ಪಾಪ ಮಾಡಿದರೆ ಸಮುದ್ರಕ್ಕೆ ಬೀಳುವುದು.

(3) ಸಮುದ್ರದಲ್ಲಿ ಮೊಳಕಾಲುದ್ದ ನೀರು ಇರುವುದರಿಂದ ಸಾವು ಬರಲ್ಲ ಎಂಬ ಸಮಾಧಾನ.

(4) ಪಾಪಿಗಳಿಗೆ ಸಮುದ್ರದ ತುಂಬ ನೀರಿದ್ದರೆ ಕಷ್ಟ.

TEACHERS adda247

**ನಿರ್ದೇಶನ : ಈ ಕೆಳಗಿನ ಗದ್ಯಭಾಗವನ್ನು ಓದಿ ಅನುಸರಿಸಿ ಬರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ 129 - 135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಇಪ್ಪತ್ತೈದು ವರ್ಷಗಳ ತರುವಾಯ ಒಂದು ವ್ಯಕ್ತಿಯನ್ನು ಸಂಧಿಸಬೇಕಾದ ಪ್ರಸಂಗ ಬಂದರೆ ...... ಕಲ್ಪಿಸಿಕೊಳ್ಳಿ. ನನ್ನ ಸಹಪಾಠಿಯೊಬ್ಬ ಇಂಜಿನಿಯರ್ ಆಗಿ, ನಾಲ್ಕು ಜನ ಮಕ್ಕಳು ಪಡೆದು, ಭ್ರಷ್ಟತೆಯ ಆರೋಪಕ್ಕಾಗಿ ಸಸ್ಪೆಂಡ್ ಆಗಿ, ಕುಡಿದು ಆಲ್ಕೋಹಾಲಿಕ್ ಆಗಿ ಒಮ್ಮೆ ಫೋನ್ ಮಾಡಿದ. "ಕೃಷ್ಣಮೂರ್ತಿ, ನನ್ನ ಕ್ಲಾಸ್‌ಮೇಟ್ ಆಗಿದ್ದೆ ಕಣಯ್ಯ, ಹ್ಯಾಗಿದ್ದಿ ? ನಿನ್ನನ್ನು ಬಂದು ನೋಡಬಹುದಾ ?" ಅವನನ್ನು ಇಪ್ಪತ್ತೈದು ವರ್ಷ ನೋಡಿರದಿದ್ದರೂ ಅವನ ಕತೆ ಕೇಳಿದ್ದೆ. ಅವನ ಧ್ವನಿ ಕೂಡ ಶಾಕ್ ಮಾಡಿತು. ನೋಡಿದಾಗ ಮಾತು ಹೊರಡಲಿಲ್ಲ–ಬದುಕು ಏನೇನು ಮಾಡಿಬಿಡುತ್ತದೆ. ಈಗ ಹೇಳಬೇಕೆಂದಿರುವ ವಿಷಯ ಇನ್ನೊಂದು ವ್ಯಕ್ತಿಗೆ ಸಂಬಂಧಿಸಿದ್ದು. ನಾಲ್ಕೈದು ತಿಂಗಳಿಂದ ಈಕೆಯ ಕತೆ ಕಾಡುತ್ತಿದೆ. ಕೇಳಿದ ಒಂದು ತಿಂಗಳು ಯೋಚಿಸುತ್ತಾ ಸುಮ್ಮನಿದ್ದೆ. ಕೆಲವರಿಗೆ ಹೇಳಲು ಯತ್ನಿಸಿದೆ. ಯಾರಿಗೂ ಏನನ್ನೂ ಹೇಳಿರಲಿಲ್ಲ. ಹಾಗೇ ಸುಮ್ಮನಿದ್ದರೆ ನನ್ನನ್ನು ಕೊರೆದುಹಾಕುತ್ತದೆ ಅನ್ನಿಸಿ 'ಈ ಕತೆ ಹೇಳುವುದರಿಂದ ಹೇಳಿದಾಕೆಯ ವಿಶ್ವಾಸಭಂಗ ಮಾಡಿದಂತಾಗುತ್ತದೆಯೇ' ಎಂದು ಯೋಚಿಸಿದೆ. ಆಮೇಲೆ ಎಲ್ಲವನ್ನೂ ಸ್ಪಷ್ಟಪಡಿಸಿಕೊಳ್ಳುವುದಕ್ಕಾಗಿ ಆಕೆಗೆ ಹೇಳಬೇಕೆಂದು ತೀರ್ಮಾನಿಸಿ ಹೇಳಿದೆವು. ಇದು ಆಕೆಯ ಕತೆಯಲ್ಲ, ಅನೇಕರ ಕತೆ ಅನ್ನಿಸಿ ನಮ್ಮ ಆಫೀಸಿನಿಂದ ಆಕೆಗೆ ಫೋನ್ ಮಾಡಿಸಿದೆ. ಆಕೆ ತೀರಿಕೊಂಡು ಎರಡು ವರ್ಷ ಆಗಿತ್ತು. ಇನ್ನಷ್ಟು ದಿಗ್ಭ್ರಮೆಯಾಗಿ ಸುಮ್ಮನೇ ಕೂತು ಬರೆಯತೊಡಗಿದೆ.

ಅವತ್ತು ಬೆಳಗ್ಗೆ ಆಕೆಯ ಫೋನ್ ಬಂತು. "ನಾನು ಮಾತಾಡ್ತಿರೋದು, ವನಜಾ, ನೆನಪಿದೆಯಾ ? ನಾವು ಭೇಟಿ ಮಾಡಿದ್ದು ಮಣಿಪಾಲದಲ್ಲಿ, ಯಾವುದೋ ಸಾಹಿತ್ಯ ಸಮ್ಮೇಳನದಲ್ಲಿ." ಅಷ್ಟೆಲ್ಲಾ ವಿವರಣೆ ಬೇಕಿರಲಿಲ್ಲ. ನಡು ಎತ್ತರದ, ಬೆಳ್ಳನೆಯ, ತುಂಬು ಕೆನ್ನೆಯ ವನಜಾಳನ್ನು ನೋಡಿ ಇಪ್ಪತ್ತೆಂಟು ವರ್ಷವಾಗಿತ್ತು. ಕೆನ್ನೆಯಲ್ಲಿ ಗುಳಿಬೀಳುವ, ಸ್ವಲ್ಪ ಕೆಂಚು ಕೂದಲ ಹುಡುಗಿ. ಬೆಂಗಳೂರಲ್ಲಿ ಅನೇಕ ಸಲ ಸಿಕ್ಕಿದ್ದಳು. ಚಿತ್ರ ಬರೆಯಲು ಯತ್ನಿಸುತ್ತಿದ್ದ, ತಮಾಷೆಯ ಹುಡುಗಿ.

"ನೆನಪಿದೆ, ಅಷ್ಟೆಲ್ಲಾ ಹೇಳಬೇಕಾದ್ದಿಲ್ಲ ವನಜಾ, ಈಗ ಸೀತಾಲಕ್ಷ್ಮಿ ಎಲ್ಲಿದ್ದಾಳೆ ? ಶ್ರೀನಿವಾಸ್ ಜೊತೆಗೆ ಆಕೆಯ ಮದುವೆಯಾಯಿತಾ ?" ಅಂದೆ.

"ಮದುವೆಯಾಗಿ ಅಮೆರಿಕಾದಲ್ಲಿದ್ದಾರೆ. ಇಬ್ಬರು ಮಕ್ಕಳು. ಈಚೆಗೆ ಮನೆ ಕೊಂಡುಕೊಂಡರಂತೆ" ಅಂದ ವನಜಾ ನಕ್ಕಳು. ಸ್ವಲ್ಪ ಭಾರವಾದ ನಗು, ವರ್ಷಗಳು ಧ್ವನಿಪೆಟ್ಟಿಗೆಯ ಮೇಲೆ ಕೂತಂತೆ. ಮಾತು ಮುಂದುವರಿಸಿದಳು. "ನಾನೀಗ ಹ್ಯಾಗಿದ್ದೀನಿ ಅಂತ ಕೇಳ್ತಾನೆ ಇಲ್ಲವಲ್ಲ ? ನಿಮ್ಮ ಹತ್ರ ಮಾತಾಡಬೇಕು. ಅಲ್ಲಿಗೆ ಬರಬಹುದಾ ?" ಅಂದಳು. ಸ್ವಲ್ಪ ಯೋಚಿಸಿದೆ. ಏನಾದರಿರಲಿ, ಕೇಳೇಬಿಡೋಣ ಅಂದುಕೊಂಡು, "ಸಂಜೆ ನಾಲ್ಕಕ್ಕೆ ಬಾ, ಕಾಯ್ತಿರ್ತೀನಿ" ಅಂದೆ.

**136.** ಈ ಕೆಳಗಿನವುಗಳಲ್ಲಿ ಪ್ರಕ್ರಿಯಾತ್ಮಕ ಬರವಣಿಗೆಯಲ್ಲಿ **(Process writing)** ಯಾವುದನ್ನು ಅನುಸರಿಸಬೇಕು ?

(1) ಪದಗಳ ಮಿತಿ.

(2) ಆಕರ್ಷಕ ಭಾಷಾ ಬಳಕೆ.

(3) ಸಂಬಂಧವಾಚಕ (Possessive) ಸರ್ವನಾಮದ ಬಳಕೆ.

(4) ಆಲೋಚನೆಗಳನ್ನು ವ್ಯವಸ್ಥಿತಗೊಳಿಸುವುದು.

**137.** ಬರವಣಿಗೆ ಎಂಬುದು ______ ಮತ್ತು ______ ಅಲ್ಲ

(1) ಪ್ರಕ್ರಿಯೆ, ಉತ್ಪನ್ನ.

(2) ಉತ್ಪನ್ನ, ಪ್ರಕ್ರಿಯೆ.

(3) ಪ್ರಕ್ರಿಯೆ, ಕೈಬರೆಹದ ಅಭ್ಯಾಸ.

(4) ಕೈಬರೆಹದ ಅಭ್ಯಾಸ, ಪ್ರಕ್ರಿಯೆ.

**138.** ವಿದ್ಯಾರ್ಥಿಗಳ ಬರವಣಿಗೆಯ ಕೌಶಲ್ಯವನ್ನು ನಿರ್ಣಯ ಮಾಡುವಾಗ ಅಧ್ಯಾಪಕರು ಹೆಚ್ಚು ಕೇಂದ್ರೀಕರಿಸಬೇಕಾದದ್ದು :

(1) ಆಕರ್ಷಕ ಭಾಷಾ ಬಳಕೆ.

(2) ಸರಿಯಾದ ಕಾಗುಣಿತ.

(3) ವ್ಯಾಕರಣಬದ್ಧವಾದ ಸರಿಯಾದ ರಚನೆ.

(4) ವಿಚಾರಗಳ ಅಭಿವ್ಯಕ್ತಿ.

**139.** ಪೂರ್ವ ಓದಿನ **(Pre-reading)** ಕೆಲಸಗಳು ಈ ಉದ್ದೇಶಕ್ಕಾಗಿ ಇವೆ :

(1) ಕಠಿಣ ಪದಗಳ ಅರ್ಥ ನೀಡಲು.

(2) ಪಠ್ಯದಲ್ಲಿ ಬಳಕೆಯಾಗಿರುವ ವ್ಯಾಕರಣದ ಅಂಶ / ನಿಯಮಗಳನ್ನು ವಿವರಿಸಲು.

(3) ಕಲಿಯುವವರ ಓದಿನ ಗ್ರಹಿಕೆಯ ನಿರ್ಣಯ ಮಾಡಲು.

(4) ಪಠ್ಯದ ಬಗೆಗಿನ ಅವರ ಪೂರ್ವ ತಿಳುವಳಿಕೆಯನ್ನು ಚುರುಕುಗೊಳಿಸಿ ಕಲಿಯುವವರನ್ನು ಸಿದ್ಧಗೊಳಿಸಲು.

**140.** ಈಗ, ಭಾರತದ ಸಂವಿಧಾನದ **8**ನೇ ಷೆಡ್ಯೂಲ್‌ನಲ್ಲಿ ಉಲ್ಲೇಖಿತವಾಗಿರುವ ಭಾಷೆಗಳ ಸಂಖ್ಯೆ ಎಷ್ಟು ?

(1) 16 (2) 20

(3) 22 (4) 24

**141.** ಒಬ್ಬ ಅಧ್ಯಾಪಿಕೆಯು ತನ್ನ ತರಗತಿಯಲ್ಲಿ ವಿದ್ಯಾರ್ಥಿಗಳನ್ನು ಕುರಿತು ಪ್ರಾಮಾಣಿಕವಾದ ಸಂವಹನದ ಮೂಲಕ ಅವರು ವಿಭಿನ್ನ ಸಂದರ್ಭಗಳಿಗೆ ತಕ್ಕಂತೆ ಪಾತ್ರವನ್ನು ಅಭಿನಯಿಸುವಂತೆ ಹೇಳುತ್ತಿದ್ದಾಳೆ. ಇದರ ನಂತರ ಆಕೆಯು ಅವರ ಪಾತ್ರಾಭಿನಯದ **(Role-play)** ಮೂಲಕ ಕೆಲವು ಪ್ರಸ್ತುತ ನಿಯಮಗಳನ್ನು ಹೊರಹೊಮ್ಮಿಸಿ ಅವುಗಳ ಅಭ್ಯಾಸವನ್ನು ಮಾಡಿಸುತ್ತಾಳೆ. ಆಕೆ ಕಲಿಸುತ್ತಿರುವುದು :

(1) ನಿರ್ದೇಶನಾತ್ಮಕ ವ್ಯಾಕರಣ.

(2) ವ್ಯಾಕರಣವೊಂದನ್ನೇ ಕಲಿಸುವುದು.

(3) ವಿಷಯದಲ್ಲಿ ವ್ಯಾಕರಣ.

(4) ನಿಗಮನ ಪದ್ಧತಿ.

TEACHERS adda247

**142. ಒಬ್ಬ ಭಾಷಾ ಬೋಧಕಳು ಈ ಮೂಲಕ ಎಲ್ಲಾ ವಿದ್ಯಾರ್ಥಿಗಳ ವಿಭಿನ್ನ ಕಲಿಕಾ ಶೈಲಿಗಳಿಗೆ ಸಹಾಯಕವಾಗಬಲ್ಲಳು :**

(1) ಎಲ್ಲಾ ಪದಗಳನ್ನು ಕಲಿಸಿ ಮತ್ತು ಅನುವಾದಿಸಿ ನಂತರ ಪಠ್ಯವನ್ನು ಪುನರಾವರ್ತಿಸುವುದು.

(2) ನಿರಂತರವಾಗಿ ವಿದ್ಯಾರ್ಥಿಗಳ ನಿರ್ಣಯ ಮಾಡುವುದು.

(3) ವಿದ್ಯಾರ್ಥಿಗಳನ್ನು ಅಧ್ಯಯನ ಮಾಡಲು ಮಾತ್ರವಲ್ಲದೆ ನೃತ್ಯ / ಸಂಗೀತ / ಆಟ / ಕ್ರೀಡೆ / ಚಿತ್ರಕಲೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವುದು.

(4) ವಿಭಿನ್ನ ಬಗೆಯ ಬೋಧನೆ, ತಂತ್ರ (strategies) ಗಳು ಹಾಗೂ ನಿರ್ಣಯ ವಿಧಾನಗಳನ್ನು ಬಳಸಿ ವೈವಿಧ್ಯಮಯ ಕಲಿಕಾರ್ಥಿಗಳ ಅಗತ್ಯ ಪೂರೈಸುವುದು.

**143. ಭಾಷಾ ಕಲಿಕೆಯಲ್ಲಿ ಸಾಮಾಜಿಕ ಸಂವಾದವು ಬಹುಮುಖ್ಯವಾದ ಪಾತ್ರ ವಹಿಸುವುದು – ಈ ಹೇಳಿಕೆಯು ಈ ಕೆಳಗಿನವರಲ್ಲಿ ಯಾರಿಗೆ ಸಂಬಂಧಿಸಿದ್ದು ?**

(1) ಚಾಮ್‌ಸ್ಕಿ.

(2) ಪೀಗೆಟ್.

(3) ವೈಗೋಟ್‌ಸ್ಕಿ.

(4) ಸ್ಕಿನ್ನರ್.

**144. ಮಾತಿನ ಕೌಶಲ್ಯದಲ್ಲಿ ಬಹುಮುಖ್ಯವಾದುದು :**

(1) ಸ್ಪಷ್ಟ ಮತ್ತು ಸರಿಯಾದ ಉಚ್ಚಾರಣೆ.

(2) ವಿಷಯ ಮತ್ತು ಸಂದರ್ಭಕ್ಕೆ ತಕ್ಕಂತೆ ಮಾತನಾಡುವುದು.

(3) ಮೃದುವಾಗಿ ಮಾತನಾಡುವುದು.

(4) ಆಕರ್ಷಕವಾಗಿ ಮಾತನಾಡುವುದು.

**145. ಒಂದು ಮಗುವು ಎದುರಿಸುತ್ತಿರುವ ಭಾಷಾ ಕಲಿಕೆಯ ನಿರ್ದಿಷ್ಟ ಸಮಸ್ಯೆಯನ್ನು ಅರಿಯಲು ಸಹಾಯ ಮಾಡುವ ಕಿರುಪರೀಕ್ಷೆ ಎಂದರೆ :**

(1) ಪ್ರತ್ಯೇಕತಾ ಅಂಶದ (Discrete Point) ಕಿರು ಪರೀಕ್ಷೆ.

(2) ಚಿಕಿತ್ಸಕ (Diagnostic) ಕಿರುಪರೀಕ್ಷೆ.

(3) ಸಂವಹನ ಕಿರುಪರೀಕ್ಷೆ.

(4) ಸಮಸ್ಯೆ ನಿವಾರಣಾ ಕಿರುಪರೀಕ್ಷೆ.

**146. ವಿಭಾಗ (Portfolio) ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?**

(1) ಇದು ಬರೆಹದ ರೂಢಿಯನ್ನು ಬೆಳೆಸುತ್ತದೆ.

(2) ಇದು ವಿದ್ಯಾರ್ಥಿಗಳ ಕೆಲಸವನ್ನು ಸಂಗ್ರಹಿಸಿ, ಜೋಪಾನವಾಗಿ ಇಡುವ ಉದ್ದೇಶವನ್ನು ಹೊಂದಿದೆ.

(3) ಇದು ಬೋಧಕರ ಸಮಯವನ್ನು ಉಳಿಸಿ ವಿದ್ಯಾರ್ಥಿಗಳನ್ನು ಕಾರ್ಯಶೀಲರನ್ನಾಗಿಸುತ್ತದೆ.

(4) ಇದು ಮಗುವಿನ ಅನುಕ್ರಮಿತ ಪ್ರಗತಿಯನ್ನು ಅಳೆಯಲು ಬೋಧಕರಿಗೆ ಸಹಾಯ ಮಾಡುತ್ತದೆ.

TEACHERS adda247

**147.** ಸ್ವರ ಶೈಲಿ **(Intonation)**ಯ ವ್ಯತ್ಯಾಸವು ________ ದಲ್ಲಿ ಕಂಡು ಬರುತ್ತದೆ.

(1) ಅಂಗ (Organ).

(2) ಶಬ್ದ (Sound).

(3) ಗಾಳಿ (Air).

(4) ಸ್ವರತ್ವ (Pitch).

**148.** ವಾಣಿಯು ಮನೆಯಲ್ಲಿ ಹೆಚ್ಚು ಮಾತನಾಡದೆ, ಶಾಲೆಯಲ್ಲಿ ಹೆಚ್ಚು ಮಾತನಾಡುತ್ತಾಳೆ. ಇದು ತೋರಿಸುವುದೇನೆಂದರೆ :

(1) ಅವಳು ಮನೆಯನ್ನು ಇಷ್ಟಪಡುವುದಿಲ್ಲ.

(2) ಅವಳ ಯೋಚನೆಗಳು ಶಾಲೆಯಲ್ಲಿ ಗುರುತಿಸಲ್ಪಡುತ್ತವೆ.

(3) ಶಾಲೆಯು ಮಕ್ಕಳಿಗೆ ಹೆಚ್ಚು ಮಾತನಾಡಲು ಅವಕಾಶವನ್ನು ಒದಗಿಸಿಕೊಡುತ್ತದೆ.

(4) ಅಧ್ಯಾಪಕರು ತರಗತಿಯಲ್ಲಿ ಶಿಸ್ತಿಗೆ ಯಾವುದೇ ಗಮನ ನೀಡುವುದಿಲ್ಲ.

**149.** ಯಾವ ಎರಡು ಅಂಶಗಳು ಭಾಷಾ ಪ್ರಾವೀಣ್ಯತೆಯನ್ನು ಒಳಗೊಳ್ಳುತ್ತವೆ ?

(1) ಸರಿಯಾದ ಉಚ್ಚಾರ ಮತ್ತು ಸೂಕ್ಷ್ಮ ಓದುವಿಕೆ.

(2) ನಕಲು ಮಾಡುವಿಕೆ ಮತ್ತು ಸುಂದರವಾದ ಬರವಣಿಗೆ.

(3) ನಿಖರತೆ ಮತ್ತು ನಿರರ್ಗಳತೆ.

(4) ಶೀಘ್ರ ಓದು ಮತ್ತು ಮೇಲು ಪದರದ ಓದು.

**150.** ಯಾವಾಗ ಭಾಷಾ ಕಲಿಕೆಯು ಸುಲಭವಾಗುತ್ತದೆ ಎಂದರೆ :

(1) ಪಠ್ಯಪುಸ್ತಕಗಳನ್ನು ಕಲಿಸದೇ ಇದ್ದಾಗ.

(2) ಪರೀಕ್ಷೆಗಳು ಇಲ್ಲದಿದ್ದಾಗ.

(3) ಸಮೃದ್ಧ ಭಾಷಾ ಪರಿಸರವು ದೊರೆತಾಗ.

(4) ಬರವಣಿಗೆಯ ಮುನ್ನಾ ವ್ಯಾಕರಣದ ತರಬೇತಿ ಮತ್ತು ಅಭ್ಯಾಸಕ್ಕೆ ಹೆಚ್ಚಿನ ವೇಳೆ ನೀಡಿದಾಗ.

TEACHERS adda247

